# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2134

ಸದಸ್ಯರ ಹೆಸರು : ಶ್ರೀ ಪ್ರಕಾಶ್ ಕೆ. ರಾಥೋಡ್

ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಉತ್ತರಿಸುವ ದಿನಾಂಕ : 18.03.2022.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಕೆ.ಎಸ್.ಆರ್.ಟಿ.ಸಿ ಮತ್ತು ಬಿ.ಎಂ.ಟಿ.ಸಿ ಹಾಗೂ ಇತರ ನಿಗಮಗಳಿಂದ ಸಿಬ್ಬಂದಿಯು ಪ್ರತಿಭಟನೆ ಕೈಗೊಂಡಿದ್ದ ಸಂರ್ಭದಲ್ಲಿ ಎಷ್ಟು ಜನ ಕಾರ್ಮಿಕರನ್ನು ಅಮಾನತ್ತು/ ವಜಾಗೊಳಿಸಲಾಗಿತ್ತು; (ನಿಗಮವಾರು ವಿವರ ನೀಡುವುದು) | ರಾಜ್ಯದ ನಾಲ್ಕೂ ಸಾರಿಗೆ ನಿಗಮಗಳಲ್ಲಿ ಪ್ರತಿಭಟನೆ ಸಂದರ್ಭದಲ್ಲಿ ಅಮಾನತ್ತು/ ವಜಾಗೊಳಿಸಲಾಗಿರುವ ನೌಕರರ ನಿಗಮವಾರು ಮಾಹಿತಿ ಈ ಕೆಳಕಂಡಂತಿದೆ: (see table below) |
| ಆ. | ಅಮಾನತ್ತು, ವಜಾಗೊಂಡಿರುವ ಸಿಬ್ಬಂದಿಗಳನ್ನು ಪುನರ್ ನೇಮಕ ಮಾಡಿಕೊಳ್ಳಲಾಗಿದೆಯೇ ; | **ಕ.ರಾ.ರ.ಸಾ.ನಿಗಮ**<br><br>ಅಮಾನತ್ತುಗೊಂಡ ಎಲ್ಲಾ 281 ಸಿಬ್ಬಂದಿಗಳ ಅಮಾನತ್ತು ಹಿಂಪಡೆಯಲಾಗಿದೆ.<br><br>ವಜಾಗೊಂಡ 74 ಸಿಬ್ಬಂದಿಗಳ ಪೈಕಿ 05 ಸಿಬ್ಬಂದಿಗಳನ್ನು ಪುನರ್ ನೇಮಕ ಮಾಡಲಾಗಿದೆ. |
| ಇ. | ಇದುವರೆಗೆ ಎಷ್ಟು ಸಿಬ್ಬಂದಿಗಳನ್ನು ಪುನರ್ ಸೇವೆಗೆ ಪಡೆಯಲಾಗಿದೆ; | ಉಳಿದ ಪ್ರಕರಣಗಳನ್ನು ಸರ್ಕಾರದ ನಿರ್ದೇಶನದಂತೆ ಲೋಕ್ ಅದಾಲತ್ ಮೂಲಕ ಬಗೆಹರಿಸಲು ನ್ಯಾಯಾಲಯದ ಆದೇಶದಂತೆ |

| ನಿಗಮ | ಅಮಾನತ್ತು ಕಾರ್ಮಿಕರ ಸಂಖ್ಯೆ | ವಜಾಗೊಳಿಸಲಾಗಿರುವ ಕಾರ್ಮಿಕರ ಸಂಖ್ಯೆ |
|---|---|---|
| ಕ.ರಾ.ರ.ಸಾ.ನಿಗಮ | 281 | 74 |
| ಬೆಂ.ಮ.ಸಾ.ಸಂಸ್ಥೆ | 2441 | 1353 |
| ವಾ.ಕ.ರ.ಸಾ.ಸಂಸ್ಥೆ | 61 | 18 |
| ಕ.ಕ.ರ.ಸಾ.ನಿಗಮ | 63 | 60 |
| **ಒಟ್ಟು** | **2846** | **1505** |

| | | |
|---|---|---|
| | ಹಾಗೂ ಎಷ್ಟು ಸಿಬ್ಬಂದಿಗಳನ್ನು ಯಾವ ಕಾಲಮಿತಿಯೊಳಗೆ ಪುನರ್ ನೇಮಕ ಮಾಡಿಕೊಳ್ಳಲಾಗುವುದು ? (ವಿವರ ಒದಗಿಸುವುದು) | ಕ್ರಮವಹಿಸಲಾಗುವುದು.<br><br>**<u>ಬೆಂ.ಮ.ಸಾ.ಸಂಸ್ಥೆ</u>**<br><br>ಅಮಾನತ್ತುಗೊಂಡಿದ್ದ ನೌಕರರನ್ನು ಕರ್ತವ್ಯಕ್ಕೆ ನಿಯೋಜಿಸಲಾಗಿದೆ. ವಜಾಗೊಂಡ ಪ್ರಕರಣಗಳ ಪೈಕಿ ಲೋಕಾದಲತ್‌ನಲ್ಲಿ ಇತ್ಯರ್ಥವಾಗುತ್ತಿರುವ ಪ್ರಕರಣಗಳಲ್ಲಿ ನೌಕರರನ್ನು ಪುನರ್ ನೇಮಕ ಮಾಡಲಾಗುತ್ತಿದೆ.<br><br>**<u>ವಾ.ಕ.ರ.ಸಾ.ಸಂಸ್ಥೆ</u>**<br><br>ಮುಷ್ಕರ ಅವಧಿಯಲ್ಲಿ ಅಮಾನತ್ತಿನಲ್ಲಿದ್ದ ಒಟ್ಟು 61 ಸಿಬ್ಬಂದಿಗಳನ್ನು ಅಮಾನತ್ತಿನಿಂದ ತೆರವುಗೊಳಿಸಿ ಸೇವೆಯಲ್ಲಿ ಮರುನಿಯೋಜಿಸಲಾಗಿದೆ. ಸೇವೆಯಿಂದ ವಜಾ ಮಾಡಲಾದ ಒಟ್ಟು 18 ಖಾಯಂ ಸಿಬ್ಬಂದಿಗಳಲ್ಲಿ 13 ಸಿಬ್ಬಂದಿಗಳು ಮೇಲ್ಮನವಿ ಸಲ್ಲಿಸಿದ್ದು, ಎಲ್ಲ ಮೇಲ್ಮನವಿಗಳನ್ನು ತಿರಸ್ಕರಿಸಿದೆ.<br><br>**<u>ಕ.ಕ.ರ.ಸಾ.ನಿಗಮ</u>**<br><br>ಮುಷ್ಕರ ಅವಧಿಯಲ್ಲಿ ವಜಾಗೊಂಡ ಒಟ್ಟು 60 ಖಾಯಂ ನೌಕರರ ಪೈಕಿ, 45 ನೌಕರರು ಮೇಲ್ಮನವಿಯನ್ನು ಸಲ್ಲಿಸಿದ್ದು, ಅವರುಗಳ ಪೈಕಿ 07 ನೌಕರರನ್ನು ಮರುನೇಮಕ ಮಾಡಿಕೊಳ್ಳಲಾಗಿದ್ದು, ಉಳಿದ 38 ನೌಕರರು ಸಲ್ಲಿಸಿದ ಮೇಲ್ಮನವಿಗಳನ್ನು ತಿರಸ್ಕರಿಸಲಾಗಿದೆ. ಮಿಕ್ಕುಳಿದ 15 ನೌಕರರು ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ.<br><br>ಮುಷ್ಕರದ ಅವಧಿಯಲ್ಲಿ ಅಮಾನತ್ತುಗೊಳಿಸಲಾದ ಎಲ್ಲಾ 63 ಜನ ಖಾಯಂ ನೌಕರರ ಅಮಾನತ್ತು ಆದೇಶ ತೆರವುಗೊಳಿಸಲಾಗಿದೆ. |

ಸಂಖ್ಯೆ: ಟಿಡಿ 107 ಟಿಸಿಕ್ಯೂ 2022

(ಬಿ.ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು